ಸಾಕಷ್ಟು ಜಾಗ ಇದೆ ಎಲ್ಲಾದರೂ 5–10 ಕಿ.ಮೀ ದೂರದಲ್ಲಿ ಮಾಡಬಹುದಲ್ಲವೇ? ಅದಕ್ಕೆ ಹಠಕ್ಕೆ ಬೀಳಬಾರದು ಎಂದು ನಾನು ಹೇಳುತ್ತಿದ್ದೇನೆ.

ತ್ರಿಪುರಾಂತ ಕೆರೆಯ ಅಭಿವೃದ್ಧಿ

101(194) ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ) ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಹಾಗೂ ಯುವಜನಸೇವೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವಕಲ್ಯಾಣದಲ್ಲಿರುವ ತ್ರಿಪುರಾಂತ ಕೆರೆಯನ್ನು ಕೇಂದ್ರ ಸರ್ಕಾರದ ಪ್ರವಾಸೋದ್ಯಮ ಇಲಾಖೆಯ ಅನುದಾನದಿಂದ ಅಭಿವೃದ್ಧಿಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;

ಆ) ಹಾಗಿದ್ದಲ್ಲಿ, ಇದಕ್ಕಾಗಿ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಯಾವಾಗ ಸಲ್ಲಿಸಿದೆ.

ಇ) ಈ ಕೆರೆಯ ಅಭಿವೃದ್ಧಿಗೆ ಅಗತ್ಯವಿರುವ ಹಣವೆಷ್ಟು; ಈ ಹಣದಿಂದ ಯಾವ ಯಾವ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳುವ ಉದ್ದೇಶ ಸರ್ಕಾರಕ್ಕೆ ಇದೆ;

ಈ) ಕೇಂದ್ರ ಸರ್ಕಾರದಿಂದ ಅನುಮೋದನೆ ದೊರೆತಿದೆಯೇ; ಹಾಗಿದ್ದಲ್ಲಿ, ರಾಜ್ಯಕ್ಕೆ ಕೇಂದ್ರ ಸರ್ಕಾರದಿಂದ ಇದಕ್ಕಾಗಿ ಎಷ್ಟು ಅನುದಾನ ಬಂದಿದೆ?

ಶ್ರೀ ಜಿ. ಜನಾರ್ಧನರೆಡ್ಡಿ (ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಹಾಗೂ ಯುವಜನಸೇವೆ ಸಚಿವರು)

ಅ) ಹೌದು.

ಆ) ದಿನಾಂಕ 14–6–2010ರಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ದಿನಾಂಕ 6–10–2010ರಂದು ಈ ಯೋಜನೆಯನ್ನು ಆದ್ಯತೆಯ ಮೇಲೆ ಪರಿಗಣಿಸುವಂತೆ ಪತ್ರ ಬರೆಯಲಾಗಿದೆ.

ಇ) ಈ ಕೆರೆಯ ಬಳಿ ಪ್ರವಾಸಿ ಸೌಲಭ್ಯಗಳ ಅಭಿವೃದ್ಧಿಗಾಗಿ ರೂ. 147.00 ಲಕ್ಷಗಳ ಪ್ರಸ್ತಾವನೆ ತಯಾರಿಸಲಾಗಿದೆ. ಸದರಿ ಹಣದಲ್ಲಿ, ತ್ರಿಪುರಾಂತಕೇಶ್ವರ ದೇವಸ್ಥಾನದ ಬಳಿ ಕೆರೆಯ ಪಕ್ಕದಲ್ಲಿ ಕಾಲುಪಥ, ಆಸನಗಳ

ವ್ಯವಸ್ಥೆ... ಕುಡಿಯುವ ನೀರಿನ ವ್ಯವಸ್ಥೆ, ಪರಗೋಲ, ಸೋಲಾರ್ ದೀಪಗಳು ಮುಂತಾದ ಪ್ರವಾಸಿ ಸೌಲಭ್ಯಗಳನ್ನು ಕಲ್ಪಿಸಲು ಪ್ರಸ್ತಾಪಿಸಲಾಗಿದೆ.

ಈ) ಕೇಂದ್ರ ಸರ್ಕಾರದಿಂದ ಇನ್ನೂ ಅನುಮೋದನೆ ದೊರತಿಲ್ಲ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವ ಕಲ್ಯಾಣ): ಸನ್ಮಾನ್ಯ ಅಧ್ಯಕ್ಷರೆ, ಬಸವ ಕಲ್ಯಾಣ ಒಂದು ಪ್ರಸಿದ್ಧವಾದ ಸ್ಥಳವಾಗಿದ್ದು, ಇದು ಒಂದು International Tourist Center ಆಗಬೇಕೆಂದು ಸರ್ಕಾರದ ಕಲ್ಪನೆ ಇದೆ. ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ, ಬಸವ ಕಲ್ಯಾಣ ತಾಲ್ಲೂಕನ್ನು tourist center ಮಾಡುವುದಕ್ಕೆ ಏನಾದರೂ ಸರ್ಕಾರದ ಪ್ರಸ್ತಾವನೆ ಇದೆಯೇ ಹೇಗೆ? ಎರಡನೆಯದಾಗಿ, ಬಸವ ಕಲ್ಯಾಣವು ಹತ್ತಿರವಿದ್ದು, ಮಹಾರಾಷ್ಟ್ರ ಮತ್ತು ಕರ್ನಾಟಕ, ಆಂಧ್ರಪ್ರದೇಶಕ್ಕೆ ಸೇರಿದ ಪ್ರದೇಶವಾಗಿದೆ. ಸಾಕಷ್ಟು ಪ್ರವಾಸಿಗರು ಬರುತ್ತಿದ್ದಾರೆ. ಸರ್ಕಾರದವರು ಇಷ್ಟೆಲ್ಲಾ ಹಣ ಕೊಟ್ಟು ಎಲ್ಲಾ development ಮಾಡುತ್ತಿದ್ದಾರೆ. ಆದರೆ ಪ್ರವಾಸಿ ಕೆರೆ ಏನಿದೆ, ತ್ರಿಪುರಾಂಬ ಕೆರೆ ಎಂದರೆ ಒಂದು ಪ್ರಸಿದ್ಧವಾದ ಕೆರೆ. ಹಿಂದೆ ಸುಮಾರು 265 ಎಕರೆ ಜಮೀನು ಇತ್ತು. ಈಗ ಅದನ್ನೆಲ್ಲಾ encroachment ಮಾಡಿದ್ದಾರೆ.

250 ಎಕರೆ ಜಮೀನು ಇದೆ. ಕೆರೆ ಅಭಿವೃದ್ಧಿ ಬಗ್ಗೆ ಸರ್ಕಾರದ ಕಾರ್ಯಕ್ರಮಗಳೇನು? ಅಥವಾ ಹಣ ಬಿಡುಗಡೆ ಮಾಡುತ್ತಾರೋ ಹೇಗೆ? ಇದರ ಬಗ್ಗೆ ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಜನಾರ್ಧನ ರೆಡ್ಡಿ (ಮಾನ್ಯ ಪ್ರವಾಸೋದ್ಯಮ ಸಚಿವರು): ಸನ್ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ಬಸವಕಲ್ಯಾಣವನ್ನು ಪ್ರವಾಸಿ ತಾಣವಾಗಿ ಮಾಡಲು ಸರ್ಕಾರದ ಕಡೆಯಿಂದ ಗುರುತಿಸಿದ್ದು, ಈಗಾಗಲೇ ಶೌಚಾಲಯಗಳ ನಿರ್ಮಾಣ ಮತ್ತು ಒಂದು ಯಾತ್ರಿ ನಿವಾಸ ನಿರ್ಮಾಣ ಮಾಡಿ, ಅದನ್ನು ಈಗಾಗಲೇ ಖಾಸಗಿಯವರಿಗೆ ವಹಿಸಿಕೊಡಲು ಸರ್ಕಾರ ಒಂದು ಜವಾಬ್ದಾರಿಯುತ ವಾದಂತಹ ಕೆಲಸವನ್ನು ಮಾಡಿದೆ. ಅದೇ ರೀತಿಯಲ್ಲಿ ನಾವು ಬಹಳಷ್ಟು ದೊಡ್ಡ ಪ್ರಮಾಣದಲ್ಲಿ ಒಂದು ಪ್ರಚಾರವನ್ನು ವಿವಿಧ ಮಾಧ್ಯಮಗಳ ಮೂಲಕ ಮಾಡುವ ಮೂಲಕ ಬಸವಕಲ್ಯಾಣಕ್ಕೆ ಪ್ರವಾಸಿಗರು ಬರುವಂತಹ ರೀತಿಯಲ್ಲಿ ಈಗಾಗಲೇ ಮಾಡುತ್ತಿದ್ದೇವೆ. ಜೊತೆಗೆ ಇವತ್ತೇನು ತ್ರಿಪುರಾಂಬ ಕೆರೆಯ ಬಗ್ಗೆ ಮಾನ್ಯ

ಅಟ್ಟೂರ್ ಅವರು ಏನು ಒಂದು ವಿಷಯವನ್ನು ಕೇಳಿದ್ದಾರೆ. ಆ ಒಂದು ವಿಷಯದಲ್ಲಿ ಸುಮಾರು 147 ಲಕ್ಷಕ್ಕೆ ಇವತ್ತು ನಮ್ಮ ರಾಜ್ಯ ಸರ್ಕಾರದ ಕಡೆಯಿಂದ ಮೊನ್ನೆ ಜೂನ್ ತಿಂಗಳಲ್ಲಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿದ್ದೇವೆ. ಮೊನ್ನೆ ಫೆಬ್ರವರಿ ತಿಂಗಳಲ್ಲಿ ಕೂಡ remind ಮಾಡಿದ್ದೇವೆ. ಒಟ್ಟಾರೆ 5 ಕೋಟಿ ರೂಪಾಯಿ ಯೋಜನೆ ಇರುವಂತಹ ಒಂದು ಕೆಲಸಗಳನ್ನು ಇಡೀ ನಮ್ಮ ಬಸವಕಲ್ಯಾಣದಲ್ಲಿ ಇವತ್ತು ಬಂದವರ ಓಣಿಯಲ್ಲಿರುವಂತಹ ಅಕ್ಕ ಮಹಾದೇವಿಯ ಒಂದು ಪವಿತ್ರವಾದಂತಹ ಮಂಟಪದ ಬಳಿ ಒಂದು ಯಾತ್ರಿ ನಿವಾಸ ಮಾಡುವುದರ ಜೊತೆಗೆ 5 ಕೋಟಿ ಹಣದಲ್ಲಿ ಯೋಜನೆಗಳನ್ನು ನಾವು ಈಗಾಗಲೇ ರೂಪಿಸಿದ್ದೇವೆ. ಅದನ್ನು ಬರುವಂತಹ ದಿವಸಗಳಲ್ಲಿ ನಾವು ಕಾರ್ಯಕ್ರಮಗಳನ್ನು ಮಾಡುತ್ತೇವೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್: ಇದೊಂದು ಬಹಳ ಪವಿತ್ರವಾದಂತಹ ಸ್ಥಳ ಇದೆ. ಇಲ್ಲಿ ಸಾಹೇಬರು ಏನು ಹೇಳುತ್ತಾರೆ. ಈಗೇನು garden ಮಾಡುವಂತಹದು ಇದೆ. ಬೆಂಗಳೂರು, ಮೈಸೂರಿನಲ್ಲಿ ಲಾಲ್‌ಬಾಗ್ ಮಾಡುತ್ತೀರಿ, ಬೃಂದಾವನ್ ಗಾರ್ಡನ್ ಮಾಡುತ್ತೀರಿ. ಯಾವ International Pilgrim Centre ಎಂದು declare ಮಾಡುತ್ತಿದ್ದೀರಿ ಬಸವಕಲ್ಯಾಣಕ್ಕೆ.

ಅಧ್ಯಕ್ಷರು: 5 ಕೋಟಿ ರೂಪಾಯಿ ಯೋಜನೆ ಹಾಕಿದ್ದಾರೆ ಎಂದು ಹೇಳಿದ್ದಾರೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್: ಅದರ ಸಲುವಾಗಿ ಏನಾದರೂ ಕಾರ್ಯಕ್ರಮ ಆಗಬೇಕು. ಮಾನ್ಯ ಮಂತ್ರಿಗಳು ಈಗ ಅಲ್ಲಿ ಮೊನ್ನೆ ಹೇಳಿದ್ದಾರೆ. ಅಲ್ಲಿ tourist centre, ಬೇರೆ ಯಾವುದೋ ಒಂದು ಯಾತ್ರಿ ನಿವಾಸ ಮಾಡಿದ್ದಾರೆ. ಅಲ್ಲಿ ಜನರಿಗೆ ಯಾವುದೂ ಫೆಸಿಲಿಟೀಸ್ ಇಲ್ಲ, ಜನಗಳಿಗೆ ತುಂಬಾ ತೊಂದರೆ ಆಗುತ್ತಿದೆ. ಅದರ ಬಗ್ಗೆ ತ್ರಿಪುರಾಂಬ ಕೆರೆಗೆ ಹೆಚ್ಚಿನ ಹಣ ಕೊಡಬೇಕು. Childrens park ಆಗಲಿ, ಬಂದವರಿಗೆ ಯಾವ ರೀತಿ ಲಾಲ್ ಬಾಗ್, ಬೃಂದಾವನ್ type ನಲ್ಲಿದೆ, ಆ ರೀತಿ ಮಾಡಲು ಅವರಿಗೇನಾದರೂ ಹಣ ಬಿಡುಗಡೆ ಮಾಡುತ್ತಾರೋ ಹೇಗೆ ಎಂದು ತಿಳಿಸಬೇಕು.

ಶ್ರೀ ಜಿ. ಜನಾರ್ಧನ ರೆಡ್ಡಿ: ಸನ್ಮಾನ್ಯ ಸಭಾಧ್ಯಕ್ಷರೆ, ನಾನು ಅಧಿಕಾರಿಗಳ ಜೊತೆಯಲ್ಲಿ ಕುಳಿತು ಮಾತನಾಡಿ ಇವತ್ತೇನು ಈ ಯೋಜನೆಗಳು ಅಲ್ಲದೇ ಮಾನ್ಯ ಸನ್ಮಾನ್ಯ ಅಟ್ಟೂರ್ ಅವರು ಹೇಳಿದ ಹಾಗೆ ಇನ್ನೂ ಹೆಚ್ಚಿನ ಕೆಲಸ ಮಾಡಲಿಕ್ಕೆ ಆದ್ಯತೆಯನ್ನು ಕೊಡುತ್ತೇನೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್: ಮಾನ್ಯ ಮಂತ್ರಿಗಳು ನನ್ನ ಮತ ಕ್ಷೇತ್ರಕ್ಕೆ ಮಾಡಬೇಕು.

ಶ್ರೀ ಜಿ. ಜನಾರ್ಧನರೆಡ್ಡಿ: ಖಂಡಿತ ವಿಸಿಟ್ ಮಾಡುತ್ತೇನೆ.

ಅಧ್ಯಕ್ಷರು: ಮಾನ್ಯ ಈಶ್ವರ್ ಭೀಮಣ್ಣ ಖಂಡ್ರೆಯವರೆ ನಿಮ್ಮ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಒಂದು ವಾರ ಸಮಯ ಕೇಳಿದ್ದಾರೆ. ಮುಂದಿನ ವಾರ ತೆಗೆದುಕೊಳ್ಳುತ್ತೇನೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್: ಮಾನ್ಯ ಮಂತ್ರಿಗಳು ನಾನು ಕ್ಷೇತ್ರಕ್ಕೆ ಬರುವಂತೆ 3–4 ಸಾರಿ ಪ್ರಯತ್ನ ಮಾಡಿದ್ದೇನೆ, ಅವರು ಬಂದಿಲ್ಲ, ದಯಮಾಡಿ ಒಂದು ಸಾರಿ ವಿಸಿಟ್ ಮಾಡಬೇಕು.

ಶ್ರೀ ಜಿ. ಜನಾರ್ಧನ ರೆಡ್ಡಿ: ಯಾತ್ರಿ ನಿವಾಸಕ್ಕೆ ಭೂಮಿ ಪೂಜೆ ಮಾಡಿದ್ದಾರೆ, ಕಡತ ಇಲ್ಲ ಎಂದು ಹೇಳಿದ್ದೆ. ಆದರೆ ಇವತ್ತು ನಮ್ಮ ಅಧಿಕಾರಿಗಳು ಕೊಟ್ಟಂತಹ ಉತ್ತರ ಏನು ಇದೆ ಅಂದರೆ ಲಿಂಟಲ್ ಲೆವೆಲ್‌ಗೆ construction ಆಗಿದೆ. ಅದನ್ನು ಇವತ್ತು ಮಾನ್ಯ ಶಾಸಕ ಮಿತ್ರರಿಗೆ clarification ಕೊಡುತ್ತಿದ್ದೇನೆ.

ಚಾಮರಾಜನಗರ ಜಿಲ್ಲೆಯಲ್ಲಿ ಕೆ.ಹೆಚ್.ಬಿ. ಯಿಂದ ನಿವೇಶನ ನಿರ್ಮಾಣ

103(594) ಶ್ರೀ ಮಹದೇವ ಪ್ರಸಾದ ಹೆಚ್.ಎಸ್. (ಗುಂಡ್ಲುಪೇಟೆ) ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರ ಜಿಲ್ಲೆಯ ಯಾವ ಸ್ಥಳದಲ್ಲಿ ಕರ್ನಾಟಕ ಗೃಹ ಮಂಡಳಿ ವತಿಯಿಂದ ನಿವೇಶನ/ಮನೆ ಹಂಚಿಕೆ ಮಾಡಲು ಬೇಡಿಕೆ ಸಮೀಕ್ಷೆ ನಡೆಸಲಾಗಿದೆ. ಆ ಬೇಡಿಕೆ ಸಮೀಕ್ಷೆಯಲ್ಲಿ ಬಂದಿರುವ ಅರ್ಜಿಗಳು ಎಷ್ಟು; ಯಾವ ಸ್ಥಳದಲ್ಲಿ ಈಗಾಗಲೇ ನಿವೇಶನ/ಮನೆ ನಿರ್ಮಿಸಿ ಹಂಚಿಕೆ ಮಾಡಲಾಗಿದೆ; (ವಿವರಿಸುವುದು)